**OS 97/2018**

24-02-2018

**ಮಧ್ಯಂತರ ಅರ್ಜಿ ನಂ. 1 ರ ಮೇಲೆ ಆದೇಶಃ**

ವಾದಿಯ ಪರ ವಕೀಲರನ್ನು ಮಧ್ಯಂತರ ಅರ್ಜಿ ನಂ.1 ರ ಮೇಲೆ ಆಲಿಸಲಾಯಿತು ಹಾಗೂ ಕಡತ ಪರಿಶೀಲಿಸಲಾಯಿತು.

ವಾದಿ ಪ್ರಸ್ತುತ ದಾವೆಯನ್ನು ಕರಾರಿನ ನಿರ್ದಿಷ್ಟ ಅನುಷ್ಠಾನಕ್ಕಾಗಿ ಹೂಡಿದ್ದು ಆಗಿರುತ್ತದೆ. ವಾದಿ ತಾನು ದಾವಾ ಆಸ್ತಿಯನ್ನು ಮೊದಲನೆ ಪ್ರತಿವಾದಿಯಿಂದ ದಿನಾಂಕಃ 24-01-2018 ರ ನೊಂದಾಯಿತ ಖರೀದಿ ಕರಾರು ಪತ್ರದ ಆಧಾರದ ಮೇಲೆ ಮೊದಲನೆ ಪ್ರತಿವಾಯಿಂದ ಖರೀಸಿದ್ದು ಈಗ ಮೊದಲನೆ ಪ್ರತಿವಾದಿ ಕ್ರಯ ಪತ್ರ ಬರೆದುಕೊಡಲು ದಾವಾ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡುವ ತಜವಿಜಿಯಲ್ಲಿ ಇರುತ್ತಾನೆ ಎಂಬುದಾಗಿರುತ್ತದೆ.

ವಾದ ಪತ್ರದೊಂದಿಗೆ ವಾದಿ ದಾವಾ ಆಸ್ತಿಯ ಪಹಣಿ ಪತ್ರಿಕೆ ಮತ್ತು ಬಿನ್ ಕಬ್ಜಾ ಖರೀದಿ ಕರಾರು ಪತ್ರ ಹಾಗೂ ಋಣಭಾರ ಪತ್ರ ಹಾಜರು ಮಾಡಿರುತ್ತಾನೆ ಹಂತದಲ್ಲಿ ವಾದಿ ಮೇಲ್ನೋನೋಟಕ್ಕೆ ತನ್ನ ಪರವಾಗಿ ದಾವೆ ಕಂಡು ಬರುವುದಾಗಿ ಸಾಭೀತು ಪಡಿಸಿರುತ್ತಾನೆ. ಒಂದು ವೇಳೆ ಮೊದಲನೆ ಪ್ರತಿವಾದಿ ದಾವಾ ಆಸ್ತಿಯಲ್ಲಿ ಬೇರೆಯವರಿಗೆ ಮಾರಾಟ ಮಾಡಿದಲ್ಲಿ ಅಥವಾ ಅದರ ಮೇಲೆ ಬೋಜಾ, ಸಾಲ ಪಡೆದುಕೊಂಡರೆ ವಾದಿಗೆ ತುಂಬಲಾದರ ನಷ್ಟ ವ ಹಾನಿಯಾಗುತ್ತದೆ. ಕಾರಣ ಈ ಹಂತದಲ್ಲಿ ಈ ಕೆಳಕಂಡಂತೆ ಏಕತರ್ಫಿ ಆದೇಶ ಮಾಡುವುದು ಸೂಕ್ತವಾಗಿರುತ್ತದೆ.

**ಆದೇಶಃ**

ಮೊದಲನೆ ಪ್ರತಿವಾದಿಯ ಅಥವಾ ಅವನ ಪರವಾಗಿ ಯಾರೇ ಆಗಲೀ ದಾವಾ ಆಸ್ತಿಯನ್ನು ಮಾರಾಟ ಮಾಡುವುದಾಗಲೀ, ಅಡಮಾನ ಮಾಡುವುದಾಗಲೀ ಅಥವಾ ಇನ್ನಾವುದೇ ರೀತಿಯಲ್ಲಿ ಪರಭಾರೆ ಮಾಡದಂತೆ ಏಕತರ್ಫಿ ಆದೇಶ ನೀಡಲಾಗಿರುತ್ತದೆ.

ದಾವಾ ಸಮನ್ಸ ಮತ್ತು ಈ ಆದೇಶದ ಪ್ರತಿಯನ್ನು ಪ್ರತಿವಾದಿಗಳಿಗೆ ಕಳಹಿಸಲು ಆದೇಶಿಸಲಾಗಿರುತ್ತದೆ. ಸಿ ಪಿ ಸಿ ಕ್ರಮಾದೇಶ 39 ನಿಯಮ 3 ಎ ನ್ನು ಪಾಲಿಸಿದಲ್ಲಿ ಮಾತ್ರ ಕಚೇರಿಗೆ ಈ ಆದೇಶದ ದೃಢೀಕೃತ ನಕಲನ್ನು ವಾದಿಗೆ ಪೂರೈಸಲು ನಿರ್ದೇಶಿಸಲಾಗಿರುತ್ತದೆ.

ದಾವಾ ಸಮನ್ಸ ಹಿಂತಿರುಗಿ ಬರಲು ದಾವೆಯನ್ನು ದಿನಾಂಕಃ 21-03-2018 ರಂದು ಕರೆಯಿರಿ.

1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ.